**ಸಿ. ಸಿ. ನಂ. 1143/2017**
**ಪಿ ಡಬ್ಲ್ಯೂ: 1**

**ಸಾಕ್ಷಿಯು ದಿನಾಂಕ:** 09-01-2026 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು**.

**<u>ಪಾಟಿ ಸವಾಲು: ಆರೋಪಿತರ ಪರ ಶ್ರೀ ಕೆ.ಜಿ.ಪಿ.ಆರ್ ವಕೀಲರಿಂದ</u>**

ನನಗೆ ಕನ್ನಡ ಒದಲು ಬರೆಯಲು ಬರುವುದಿಲ್ಲ. ನನ್ನ ದೂರನ್ನು ವಕೀಲರಿಗೆ ಹೇಳಿ ಟೈಪ್ ಮಾಡಿಸಿರುತ್ತೇನೆ. ದೂರನ್ನು ವಕೀಲರ ಕಚೇರಿಯಲ್ಲಿ ತಯಾರಿಸಲಾಗಿದೆ ಅಂದರೆ ಸರಿ. ಘಟನೆ ದಿ: **14-01-2017** ರಂದು ಆಗಿದೆ ಎಂದು ಹೇಳಿದ್ದರೂ ಎಕೆ **16** ದಿನ ತಡವಾಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ನಾನು ಅದೇ ದಿನ ಸಂಜೆ **6.00** ಗಂಟೆಗೆ ಪೋಲಿಸ್ ಠಾಣೆಗೆ ಹೋಗಿದ್ದೆ, ಅವರು ದೂರು ಸ್ವೀಕರಿಸಿಲ್ಲ ಎಂದು ನುಡಿಯುತ್ತಾರೆ. ನಾನು ದೂರು ನೀಡಲೂ ಹೋದಾಗ ಪಟ್ಟಣ ಪೋಲಿಸ್ ಠಾಣೆಯ ಪೋಲಿಸರು ಸ್ವೀಕರಿಸುತ್ತಿಲ್ಲ ಎಂದು ಅವರ ಮೇಲಾಧಿಕಾರಿಯ ಬಳಿ ದೂರು ನೀಡಿರುತ್ತೇನೆ. ಸಾಕ್ಷಿ ಮುಂದುವರೆದು ಎಸ್.ಪಿ ಕಚೇರಿಗೆ ಹೋಗಿದ್ದೆ ಎಂದು ನುಡಿಯುತ್ತಾರೆ. ಈಗ ನಾನು ನೋಡುತ್ತಿರುವ ದೂರು ಅದೇ ಆಗಿತ್ತು ಅಂದರೆ ಸರಿ. ಸಾಕ್ಷಿ ಒಂದು ದೂರಿನ ದೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ಆರೋಪಿತರ ಪರ ನಿಡಿ: **1** ಎಂದು ಗುರುತಿಸಲಾಯಿತು. ನಾನು ಬಳ್ಳಾರಿ ಎಸ್ .ಪಿ ಕಚೇರಿಯಲ್ಲಿ ಅಕ್ಟೋಬರ್ **2017** ರಲ್ಲಿ ದೂರು ನೀಡಿರುತ್ತೇನೆ ಅಂದರೆ ಸರಿಯಲ್ಲ.

ದೂರು ನೀಡಿದಾಗ ಆಸ್ತಿ ಯಾರಿಗೆ ಸಂಬಂಧಿಸಿದ್ದು ಎಂದು ತೋರಿಸಲು ಅದರೊಂದಿಗೆ ಆಸ್ತಿಯ ದಾಖಲೆಗಳನ್ನು ಪೋಲಿಸರಿಗೆ ಕೊಟ್ಟಿರಲಿಲ್ಲ ಅಂದರೆ ಸರಿ. ಆಸ್ತಿಯ ಮೂಲ ಮಾಲೀಕ ತ್ಯಾಗದಾಳ ಮೊಹಮ್ಮದ್ ಖಾಸೀಂ ಇದ್ದರು ಅಂದರೆ ಸರಿ. ಸದರಿಯವರಿಂದ ಆಸ್ತಿ ಖರೀದಿಸಿದ ಬಗ್ಗೆ ಖರೀದಿ ಪತ್ರವನ್ನು ಪೋಲಿಸರ

ಮುಂದಾಗಲೀ ನ್ಯಾಯಾಲಯದ ಮಂದಾಗಲೀ ನಾನು ಹಾಜರು ಪಡಿಸಿಲ್ಲ ಅಂದರೆ ಸರಿ. ಸದರಿ ಸ್ವತ್ತು ಮಲ್ಲಿಗೆ ಟೂರಿಸ್ಟ್ ಹೋಂ ಎಂಬ ಹೆಸರಾಂತ ಹೋಟಲ್ ನ ಎದುರಿಗೆ ಇರುತ್ತದೆ ಮತ್ತು ಅವರ ಅಕ್ಕಪಕ್ಕ ವಾಣಿಜ್ಯ ಮಳಿಗೆಗಳು ಹಾಗೂ ಕೆನಾಲ್ ಹೋಗುತ್ತದೆ ಅಂದರೆ ಸರಿ.  ಸದರಿ ಆಸ್ತಿ ಹೆದ್ದಾರಿಯ ಪಕ್ಕದಲ್ಲಿಯೇ ಇರುತ್ತದೆ ಅಂದರೆ ಸರಿ. ಮಲ್ಲಿಗೆ ಹೋಟಲ್ ಮತ್ತು ವಾಣಿಜ್ಯ ಮಳಿಗೆಗಳ ಮುಂದೆ ಸಿಸಿಟಿವಿ ಕ್ಯಾಮೆರಾಗಳು ಇರುತ್ತವೆ ಅಂದರೆ ಸರಿಯಲ್ಲ, ಮಲ್ಲಿಗೆ ಹೋಟಲ್ ಮುಂದೆ ಯಾವಾಗಲೂ ಸೆಕ್ಯೂರಿಟಿ ಗಾರ್ಡ್ ಗಳು ಇರುತ್ತಾರೆ ಅಂದರೆ ಸರಿ.

ನಾನು ಘಟನೆಯಾದ ದಿನ ಬೆಳಿಗ್ಗೆ **9-9.30** ವರೆಗೆ ಹಂಪಿಗೆ ಹೋಗಿದ್ದೆ. ಸಂಜೆ **5-5.30** ಗಂಟೆಗೆ ಹಿಂತಿರುಗಿದ್ದೆ. ನಮ್ಮ ಅಂಗಡಿಯಲ್ಲಿ ಸಿಸಿಟಿವಿ ಕ್ಯಾಮೆರಾ ಇರಲಿಲ್ಲ. ನಾನು ಹಂಪಿಗೆ ಹೋಗಿದ್ದೆ ಎಂದು ತೋರಿಸಲು ಯಾವುದೇ ಫೋಟೋ ಅಥವಾ ಇನ್ನಿತರ ದಾಖಲೆಗಳನ್ನು ಪೋಲಿಸರಿಗೆ ನಾನು ಕೊಟ್ಟಿಲ್ಲ.

ರೂ. **45,00,000/-** ಮೌಲ್ಯದ ಯಾವ ಯಾವ ಸಾಮಾಗ್ರಿಗಳು ಕಳ್ಳತನ ಆಗಿದ್ದವು ಮತ್ತು ಅವುಗಳನ್ನು ನಾವು ಎಲ್ಲಿಂದ ಖರಿಸಿದ್ದೇವು ಎಂದು ತೋರಿಸಲು ಇನ್ ವೆಂಟರಿ ಪಟ್ಟಿ ಮತ್ತು ಅವುಗಳನ್ನು ಖರೀದಿಸಿದ ಬಗ್ಗೆ ಇನ್ ವಾಯ್ಸ್ ಗಳನ್ನು ಪೋಲಿಸರಿಗೆ ನೀಡಿರುತ್ತೇನೆ. ಸದರಿ ಸಾಮಾಗ್ರಿಗಳಲ್ಲಿ ಲಾರಿ ಬಿಡಿ ಭಾಗಗಳು ಮತ್ತು ಮನೆ ಸಾಮಾಗ್ರಿಗಳು ಇದ್ದವು. ಆ ರೀತಿ ಡಿಸೇಲ್ ಟ್ಯಾಂಕ್ ಗಳು, ಹೌಸಿಂಗ್, ಲಾರಿಯ ರಾಡ್ ಗಳು ಮತ್ತು ಇತರೆ ಸಾಮಾಗ್ರಿಗಳು ಇದ್ದವು. ಅವುಗಳ ಹೆಸರುಗಳು ಈಗ ನನಗೆ ನೆನಪಾಗುತ್ತಿಲ್ಲ. ಕಳ್ಳತನ ಆದ ಬಿಡಿಭಾಗಗಳು ಅಂದಾಜು **8-10** ಟನ್ ಭಾರದ್ದಾಗಿದ್ದವು. ನಾನು ಮಾರಾಟಕ್ಕೆ ಇಟ್ಟಿದ್ದೆ ಎನ್ನಲಾದ ಸಾಮಾಗ್ರಿಗಳೆಲ್ಲಾ

ಹೊಸ ಸಾಮಾಗ್ರಿಗಳು ಅಂದರೆ ಸರಿ. ಸಾಕ್ಷಿ ಮುಂದುವರೆದು ಹಳೆಯದ್ದು ಸಹ ಇತ್ತು ಎಂದು ನುಡಿಯುತ್ತಾರೆ.

ನಾನು ಪೋಲಿಸರ ಮುಂದೇ ಒಂದು ಬಾರಿ ಸಹ ಹೇಳಿಕೆಯನ್ನು ನೀಡಿರುವುದಿಲ್ಲ. ಪೋಲಿಸರು ಸಾಮಾಗ್ರಿಗಳನ್ನು ಗುರುತು ಹಿಡಿಯಲು ನನ್ನನ್ನು ಕೋರ್ಟ್ ಹತ್ತಿರ ಕರೆಸಿದ್ದು ಬಿಟ್ಟರೆ ಬೇರೆ ವಿಚಾರ ನನಗೆ ಗೊತ್ತಿಲ್ಲ. ನಾನು ಪೋಲಿಸರ ಮುಂದೆ ದಿಃ **17-05-2017** ರಂದು ರೂ. **6,69,500/-** ಗಳಷ್ಟು ಬೆಲೆಬಾಳುವ ಸಾಮಾಗ್ರಿಗಳು ಮಾತ್ರ ಕಳ್ಳತನ ಆಗಿದ್ದವು ಮತ್ತು ಉಳಿದ ಸಾಮಾಗ್ರಿಗಳೆಲ್ಲಾ ಅಂಗಡಿಯಲ್ಲೇ ಇರುತ್ತವೆ ಎಂದು ಹೇಳಿಕೆ ನೀಡಿದ್ದೆ ಅಂದರೆ ಸರಿಯಲ್ಲ. ದೂರಿನಲ್ಲಿ ಸಾಮಾಗ್ರಿಗಳ ವಿವರಣೆಯನ್ನು ನೀಡಿರಲಿಲ್ಲ ಅಂದರೆ ಸರಿ. ನಮ್ಮ ಮನೆಯಲ್ಲಿ ಆ ದಿನ ಬಂಗಾರ ಅಥವಾ ಹಣ ಇಟ್ಟಿರಲಿಲ್ಲ ಅಂದರೆ ಸರಿ.

ನಾನು ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ ದಾಖಲೆಗಳನ್ನು ಪೋಲಿಸರಿಗೆ ನೀಡಿರಲಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಕೇಳಲಿಲ್ಲ ನಾನು ಕೊಡಲಿಲ್ಲ ಎಂದು ನುಡಿಯುತ್ತಾರೆ. ವ್ಯಾಜ್ಯ ಇರುವ ಸ್ವತ್ತು ನನ್ನ ತಂದೆ ಮತ್ತು ತಾಯಿಯ ಸ್ವತ್ತು. ಪೋಲಿಸರು ನನ್ನ ತಾಯಿ ಅನುರಾಧರವರ ಹೇಳಿಕೆಯನ್ನು ಪಡೆದಿರುತ್ತಾರೆ. ಸದರಿಯವರು ಎನು ಹೇಳಿಕೆ ನೀಡಿರುತ್ತಾರೆ ಎಂದು ನಾನು ನೋಡಿರುವುದಿಲ್ಲ. ಸದರಿಯವರನ್ನು ಕೇಳಿದಾಗ ಕಳ್ಳತನ ಆದ ಬಗ್ಗೆ ಹೇಳಿಕೆ ನುಡಿದಿರುತ್ತೇನೆ ಎಂದು ಹೇಳಿರುತ್ತಾರೆ.

ನನ್ನ ತಾಯಿ ದಿಃ **15-01-2017** ರಂದು ನಿಪಿಃ **20** ರಂತೆ ದೂರು ಒಂದನ್ನು ನೀಡಿರುತ್ತಾರೆ ಅಂದರೆ ಸರಿ. ಸದರಿ ದೂರಿನಲ್ಲಿ ನನ್ನ ತಾಯಿ ರೂ. **20,00,000/-** ಮೌಲ್ಯದ ಆಟೋ ಮೊಬೈಲ್ಸ್ ಸಾಮಾಗ್ರಿಗಳು ಕಳ್ಳತನ ಆಗಿವೆ ಎಂದು ದೂರು

ನೀಡಿದ್ದರು ಅಂದರೆ ಸರಿಯಲ್ಲ. ನನ್ನ ತಾಯಿ 10 ತೊಲೆ ಬಂಗಾರ ಮತ್ತು ರೂ. 1,00,000/- ಕಳ್ಳತನ ಆಗಿದೆ ಎಂದು ದೂರಿನಲ್ಲಿ ತಿಳಿಸಿದ್ದರು ಅಂದರೆ ಸರಿಯಲ್ಲ.

ಬ್ಯಾಂಕಿನವರು ರೂ. 45,00,000/- ಗಳನ್ನು ಯಾವುದೇ ಆಸ್ತಿ ಅಡಮಾನ ಇಟ್ಟುಕೊಂಡು ನೀಡಿಲ್ಲ. ಸಾಕ್ಷಿ ಮುಂದುವರೆದು ನಮ್ಮ ಆಟೋ ಮೊಬೈಲ್ಸ್ ನ ವ್ಯವಹಾರವನ್ನು ನೋಡಿ ಮತ್ತು ಅಂಗಡಿಯಲ್ಲಿನ ಸಾಮಾಗ್ರಿಗಳನ್ನು ನೋಡಿ ಅದರ ಆಧಾರದ ಮೇಲೆ ಸಾಲ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪೋಲಿಸರು ಈ ಪ್ರಕಣದಲ್ಲಿ ಜಪ್ತು ಪಡಿಸಿಕೊಂಡು ವರದ ಮಾಡಿರುವ ಸಾಮಾಗ್ರಿಗಳನ್ನು ಇಲ್ಲಿಯವರೆಗೂ ನಾನು ನನ್ನ ವಶಕ್ಕೆ ಪಡೆಯಲು ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಸಾಮಾಗ್ರಿಗಳು ಕೆಟ್ಟುಹೋಗಿವೆ ಆದ್ದರಿಂದ ಕೇಳಿಲ್ಲ ಎಂದು ನುಡಿಯುತ್ತಾರೆ.

1 ನೇ ಆರೋಪಿಗೂ ನನಗೂ ವೈಯಕ್ತಿಕ ಪರಿಚಯ ಮತ್ತು ದ್ವೇಷ ಇರುವುದಿಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಆತನ ಸಂಬಂಧಿಕರೊಂದಿಗೆ ವ್ಯಾಜ್ಯ ಇದೆ ಎಂದು ನುಡಿಯುತ್ತಾರೆ. ನನ್ನ ವಿರುದ್ದ 50-60 ಪ್ರಕರಣಗಳು ದಾಖಲಾಗಿರುತ್ತದೆ. ಸಾಕ್ಷಿ ಮುಂದುವರೆದು ನನ್ನ ವಿರುದ್ದ 2-3 ಪ್ರಕರಣಗಳು ಮಾತ್ರ ಇದ್ದು, ವಕೀಲರು ಪ್ರಶ್ನೆ ಮಾಡಿದಾಗ ಆ ರೀತಿ 50-60 ಎಂದು ಹೇಳಿದೆ ಎಂದು ನುಡಿಯುತ್ತಾರೆ. ನನ್ನ ವಿರುದ್ದ ಸಿಸಿ 72/2019 ಮತ್ತು ಬ್ಯಾಂಕಿಗೆ ವಂಚಿಸಿರುತ್ತೇನೆ ಎಂಬ ಪ್ರಕರಣ ಇರುತ್ತವೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರಕರಣಗಳಿವೆ ಆದರೆ ವಂಚಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣ ನನ್ನ, ನನ್ನ ಗಂಡ ಗಣೇಶ, ಮಗ ಚಂದ್ರಪ್ರಕಾಶ, ತಾಯಿ ಅನುರಾಧ ಮತ್ತು ಪಾಪಾ ಎಂಬುವವರ ವಿರುದ್ದ ಇರುತ್ತದೆ ಅಂದರೆ ಸರಿ.

ನಾನು ಮತ್ತು ನನ್ನ ಗಂಡ ದಿವಾಳಿ ಪ್ರಕರಣ 7/2018 ಎಂದು ದಾಖಲಿಸಿದ್ದೇವು ಅಂದರೆ ಸರಿ. ಈಗ ನಾನು ನೋಡುತ್ತಿರುವ ಅರ್ಜಿಯ ದೃಡಿಕೃತ ನಕಲು ಆ ಪ್ರಕರಣದ್ದು ಅಂದರೆ ಸರಿ. ಸಾಕ್ಷಿ ದಾಖಲು ನೋಡಿ ಗುರುತಿಸಿದ್ದು, ಅದನ್ನು ನಿಡಿ: 2 ಎಂದು ಗುರುತಿಸಲಾಯಿತು. ನನ್ನ ವಿರುದ್ದ ರಾಮ್ ರೆಡ್ಡಿ ಮತ್ತು ವಿಜಯ ಭಾಸ್ಕರ ರೆಡ್ಡಿ ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದರು ಅಂದರೆ ಸರಿ. ಸದರಿ ಪ್ರಕರಣದಲ್ಲಿ ನನಗೆ ಶಿಕ್ಷೆಯಾಗಿದ್ದು, ಮೇಲ್ಮನವಿ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಅಂದರೆ ಸರಿ. ನಾನು ಯಾರಿಂದ ಸಾಲ ಪಡೆದಿರುತ್ತೇನೆಯೋ ಅವರ ವಿರುದ್ದ ಪ್ರಕರಣ ದಾಖಲಿಸುವ ಪ್ರವೃತ್ತಿ ಹೊಂದಿರುತ್ತೇನೆ ಅಂದರೆ ಸರಿ. ನನ್ನ ವಿರುದ್ದ ನಿಜವಾಗಿಯೂ 50-60 ಪ್ರಕರಣಗಳು ಇರುತ್ತವೆ ಅಂದರೆ ಸರಿಯಲ್ಲ.

1 ನೇ ಆರೋಪಿ ಒಎಸ್ 338/2016 ಎಂಬ ಪ್ರಕರಣವನ್ನು ದಾಖಲಿಸಿದ ನಂತರ ಈ ಪ್ರಕರಣದ ದೂರು ನೀಡಿರುತ್ತೇವೆ ಅಂದರೆ ಸರಿ. ಸಾಕ್ಷಿ ಮುಂದುವರೆದು ದೂರು ದಾಖಲಿಸಿದಾಗ ಸಮನ್ಸ್ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಾನು ಸಾಕ್ಷ್ಯ ನುಡಿದಿರುತ್ತೇನೆ ಅಂದರೆ ಸರಿ. ಈಗ ನಾನು ನೋಡುತ್ತಿರುವ ನುಡಿಸಾಕ್ಷ್ಯದ ದೃಡೀಕೃತ ನಕಲು ಅದೇ ಪ್ರಕರಣದ್ದು ಅಂದರೆ ಸರಿ. ಸಾಕ್ಷಿ ದಾಖಲೆ ನೋಡಿ ಗುರುತಿಸಿದ್ದು, ಅದನ್ನು ನಿಡಿ: 3 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ 1 ನೇ ಆರೋಪಿ ತಾನು ತ್ಯಾಗದಾಳ ಮೊಹಮ್ಮದ್ ಖಾಸೀಂ ರವರಿಂದ ಆಸ್ತಿಯನ್ನು ದಿ: 03-09-2016 ರಂದು ಖರೀದಿದ್ದು, ನಾವು ತೊಂದರೆ ನೀಡಿರುತ್ತೇವೆ ಎಂದು ದಾವೆ ಸಲ್ಲಿಸಿದ್ದರು ಅಂದರೆ ಸರಿ. ಈಗ ನಾನು ನೋಡುತ್ತಿರುವ ತೀರ್ಪು ಸದರಿ ಪ್ರಕರಣದ್ದು ಅಂದರೆ ಸರಿ. ಆ ಪ್ರಕರಣದಲ್ಲಿ 1 ನೇ ಆರೋಪಿ ಪರ ತೀರ್ಪು ಬಂದಿದೆ ಅಂದರೆ ಸರಿ. ಸಾಕ್ಷಿ ದಾಖಲೆ

ನೋಡಿ ಗುರುತಿಸಿದ್ದು, ಅದನ್ನು ನಿಡಿಃ 4 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ತೀರ್ಪಿನ ವಿರುದ್ದ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ತಿರ್ಪನ್ನು ಪ್ರಶ್ನಿಸಿ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ. ಮೇಲ್ಮನವಿಯ ಸಂಖ್ಯೆ ನನಗೆ ನೆನಪಿಲ್ಲ. ನಾನು ಯಾವುದೇ ಮೇಲ್ಮನವಿ ಸಲ್ಲಿಸಿದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

1 ನೇ ಆರೋಪಿ ವಿವಾದಿತ ಸ್ವತ್ತನ್ನು ದಿಃ 03-09-2016 ರಂದು ಮೂಲ ಮಾಲೀಕರಿಂದ ನೊಂದಾಯಿತ ಕ್ರಯ ಪತ್ರದ ಅಡಿಯಲ್ಲಿ ಖರೀದಿಸಿ ಅದರ ಮಾಲೀಕನಾಗಿ ಅಂದಿನಿಂದಲೂ ಸ್ವಾಧೀನದಲ್ಲಿ ಇರುತ್ತಾನೆ ಅಂದರೆ ಸರಿಯಲ್ಲ. ನಾನು ಬ್ಯಾಂಕಿಗೆ ಸುಳ್ಳು ಮಾಹಿತಿ ಯನ್ನು ನೀಡಿ ಸಾಲ ಪಡೆದಿದ್ದೆ ಅಂದರೆ ಸರಿಯಲ್ಲ. ಸದರಿ ಬ್ಯಾಂಕಿನವರಿಗೆ ಆಸ್ತಿ ನನ್ನದಲ್ಲ ಮತ್ತು ಸಾಮಾಗ್ರಿಗಳು ಸಹ ನನ್ನದಲ್ಲ ಎಂದು ಗೊತ್ತಾಗಿದ್ದರಿಂದ, ನನ್ನ ಸುಳ್ಳು ಮುಚ್ಚಿ ಹಾಕಲು ಈ ಪ್ರಕರಣದ ಘಟನೆಯನ್ನು ಸೃಷ್ಟಿಸಿ ಸುಳ್ಳು ದುರು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ರಾಧಾ ಕೃಷ್ಣ ಆಟೋ ಮೊಬೈಲ್ಸ್ ಇಟ್ಟು ಸ್ವಾಧೀನದಲ್ಲಿ ಇದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆ ಕಾರಣದಿಂದಲೇ ನಾವು ಮಾಲೀಕರು ಎಂದು ತೋರಿಸಲು ಯಾವುದೇ ದಾಖಲೆಯನ್ನು ಪೋಲಿಸರಿಗಾಗಲೀ ನ್ಯಾಯಾಲಯಕ್ಕಾಗಲೀ ನೀಡಿಲ್ಲ ಅಂದರೆ ಸರಿಯಲ್ಲ. ಬ್ಯಾಂಕ್ ಸಾಲ ಮನ್ನಾ ಮಾಡಿಸಿಕೊಳ್ಳುವ ದುರುದ್ದೇಶದಿಂದ ರೂ. 45,00,000/- ಸಾಮಾಗ್ರಿಗಳು ಕಳೆದುಹೋಗಿವೆ ಎಂದು ಸುಳ್ಳು ದೂರನ್ನು ನೀಡಿದ್ದೆ ಅಂದರೆ ಸರಿಯಲ್ಲ. ನಾನಾಗಲೀ ನನ್ನ ತಂದೆ ತಾಯಿಯಾಗಲೀ ಆಸ್ತಿಗೆ ಸಂಬಂಧವಲ್ಲದ ವ್ಯಕ್ತಿಗಳು ಅಂದರೆ ಸರಿಯಲ್ಲ. ದಿಃ 14-01-2017 ರಂದು ನಾನು ಹಂಪಿಗೆ ಹೋದಾಗ

**ಸಿ. ಸಿ. ನಂ. 1143/2017**
**ಪಿ ಡಬ್ಲ್ಯೂ: 1**

ಆರೋಪಿತರು ಕಳ್ಳತನ ಮಾಡಿರುತ್ತಾರೆ ಎಂದು ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಎಲ್ಲಾ ಅಂಶಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.